ಕರ್ನಾಟಕ ಸರ್ಕಾರ
# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
# Karnataka Residential Educational Institutions Society
(An Organisation of Govt. of Karnataka)

ಸಂಖ್ಯೆ: ಕವಶಿಸಸ/ಆಡಳಿತ/ಜೇಷ್ಠತೆ/ಸಿಆರ್-01/2019-2020 ದಿನಾಂಕ: 13.11.2020

## ಅಧಿಕೃತ ಜ್ಞಾಪನ

ವಿಷಯ: ದಿನಾಂಕ: 01.01.2019 ಕ್ಕೆ ಇದ್ದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿವಿಧ ಬಿ ಮತ್ತು ಸಿ ವೃಂದದ ಅಧಿಕಾರಿ ಹಾಗೂ ನೌಕರರ ಅಂತಿಮ ಪದಕ್ರಮ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸಮಸಂಖ್ಯೆ: ಅಧಿಕೃತ ಜ್ಞಾಪನ ದಿ:17.06.2020
2. ಈ ಕಛೇರಿ ಸಮಸಂಖ್ಯೆ: ಅಧಿಕೃತ ಜ್ಞಾಪನ ದಿ:29.10.2020

********

ಉಲ್ಲೇಖಿತ (1) ರ ಅಧಿಕೃತ ಜ್ಞಾಪನದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಬಿ ಹಾಗೂ ಸಿ ವೃಂದದ ಅಧಿಕಾರಿ ಹಾಗೂ ನೌಕರರ ರಾಜ್ಯ ಮಟ್ಟದ ತಾತ್ಕಾಲಿಕ ಪಟ್ಟಿಗಳನ್ನು ದಿನಾಂಕ: 01.01.2019 ಕ್ಕೆ ಇದ್ದಂತೆ ಪ್ರಕಟಿಸಲಾಗಿತ್ತು.

ರಾಜ್ಯ ಮಟ್ಟದ ತಾತ್ಕಾಲಿಕ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಬಾಧಿತರಿಂದ ಸ್ವೀಕರಿಸಿದ ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿಗಳೊಂದಿಗೆ ಉಲ್ಲೇಖ (2)ರಲ್ಲಿ ರಾಜ್ಯ ಮಟ್ಟದ/ ಉಳಿಕೆ ಮೂಲ ವೃಂದ/ ಕಲ್ಯಾಣ ಕರ್ನಾಟಕ ವೃಂದದ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿದೆ.

ಸದರಿ ಪರಿಷ್ಕೃತ ತಾತ್ಕಾಲಿಕ ಪದಕ್ರಮ ಪಟ್ಟಿಗಳನ್ನು ನೌಕರರಿಗೆ ಪ್ರಚುರಪಡಿಸಿದ ಬಗ್ಗೆ ಸ್ವೀಕೃತಿಯನ್ನು ಹಾಗೂ ಆಕ್ಷೇಪಣೆಗಳೊಂದಿಗೆ ಪೂರಕ ದಾಖಲಾತಿಗಳನ್ನು ಪ್ರಾಂಶುಪಾಲರಿಂದ ನಿಗಧಿತ ದಿನಾಂಕದೊಳಗೆ ದೃಢೀಕರಿಸಿ ಸಲ್ಲಿಸಲು ಉಲ್ಲೇಖ (2) ರ ಅಧಿಕೃತ ಜ್ಞಾಪನದಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ದೃಢೀಕೃತ ದಾಖಲಾತಿಗಳೊಂದಿಗೆ ಆಕ್ಷೇಪಣೆಗಳನ್ನು ಸಂಬಂಧಿಸಿದ ಪ್ರಾಂಶುಪಾಲರ ಮುಖಾಂತರ ಬಾಧಿತರು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ನಿಗದಿತ ದಿನಾಂಕದೊಳಗೆ ಸ್ವೀಕರಿಸಿದ ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಹಿಂಬರಹವನ್ನು ಈ ಪತ್ರದೊಂದಿಗೆ ಸಂಘದ ವೈಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ: 01.01.2019 ಕ್ಕೆ ಇದ್ದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ವೃಂದದ ಅಧಿಕಾರಿ/ನೌಕರರ ರಾಜ್ಯ ಮಟ್ಟದ ಅಂತಿಮ ಪದಕ್ರಮ ಪಟ್ಟಿಯನ್ನು ಅನುಬಂಧ-1 ರಲ್ಲಿ, ಉಳಿಕೆ ಮೂಲ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು, ಅನುಬಂಧ-2 ರಲ್ಲಿ ಹಾಗೂ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧ-3 ರಲ್ಲಿ, ಈ ಅಧಿಕೃತ ಜ್ಞಾಪನದೊಂದಿಗೆ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಸಂಘದ ಅಧಿಕೃತ ವೈಬ್‌ಸೈಟ್ (www.kreis.kar.nic.in) ನಲ್ಲಿ ಪ್ರಕಟಿಸಲಾಗಿದೆ.

| ಕ್ರ. ಸಂ. | ವೃಂದ | ಅನುಬಂಧಗಳು | ಒಟ್ಟು ನೌಕರರ ಸಂಖ್ಯೆ | ಉಳಿಕೆ ಮೂಲ ವೃಂದ ನೌಕರರ ಸಂಖ್ಯೆ | ಕಲ್ಯಾಣ ಕರ್ನಾಟಕ ನೌಕರರ ಸಂಖ್ಯೆ |
|---|---|---|---|---|---|
| 1 | ಪ್ರಾಂಶುಪಾಲರು | ಅನುಬಂಧ-1, 2 ಮತ್ತು 3 | 315 | 271 | 44 |
| 2 | ಶಿಕ್ಷಕರು | ಅನುಬಂಧ-1, 2 ಮತ್ತು 3 | 3398 | 2804 | 594 |
| 3 | ನಿಲಯಪಾಲಕರು | ಅನುಬಂಧ-1, 2 ಮತ್ತು 3 | 110 | 90 | 20 |
| 4 | ಪ್ರಥಮ ದರ್ಜೆ ಸಹಾಯಕರು | ಅನುಬಂಧ-1, 2 ಮತ್ತು 3 | 169 | 127 | 42 |
| 5 | ಶುಶ್ರೂಷಕರು | ಅನುಬಂಧ-1, 2 ಮತ್ತು 3 | 216 | 196 | 20 |
| | ಒಟ್ಟು | | **4208** | **3488** | **720** |

ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ಸಂಬಂಧಿಸಿದ ನೌಕರರುಗಳಿಗೆ
3. ಕಛೇರಿ ಪ್ರತಿ.

ನಂ. 8, ಎಂ.ಎಸ್.ಬಿ.-1, 6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-560 052. ದೂರವಾಣಿ : 080-22283366, 22265755, 22204466, 22207722, ಟೆಲಿಫ್ಯಾಕ್ಸ್ : 080-22262288
# 8, M.S.B.-1, 6th & 7th Floor, Cunningham Road, Bengaluru-560 052. Phone : 080-22283366, 22265755, 22204466, 22207722 Telefax : 080-22262288
E-mail : edkreis@rediff.com, Website : www.kreis.kar.nic.in